ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ಕಿಯೋಲಾಡಿಯೊ ಎಂಬ ಮರುಭೂಮಿಯಲ್ಲಿ

ಭಾರತದ ಪಕ್ಷಿಕಾಶಿ ಎಂದೇ ಹೆಸರಾದ ಭರತಪುರದ ಕಿಯೋಲಾಡಿಯೊ ರಾಷ್ಟ್ರೀಯ ಅಭಯಾರಣ್ಯ ಮಾನವ ನಿರ್ಮಿತ ಕೃತಕ ತೇವಭೂಮಿ. ಸ್ಥಳೀಯ ರಾಜರುಗಳು ಐಷಾರಾಮಿ ಪ್ರಾಣಿ–ಪಕ್ಷಿಗಳ ಬೇಟೆಗೆ ಬಳಸುತ್ತಿದ್ದ ಜಾಗ. ಈಗ ವಿಶ್ವ ಪರಂಪರೆಯ ತಾಣವಾಗಿ ಬದಲಾಗಿದೆ. ವಿಶ್ವ ವನ್ಯಜೀವಿ ನಿಧಿಯ ಸಂಸ್ಥಾಪಕ ಪೀಟರ್ ಸ್ಕಾಟ್ ಈ ಅಭಯಾರಣ್ಯವನ್ನು 'ಜಗತ್ತಿನ ಪಕ್ಷಿ ವೀಕ್ಷಕರ ಸ್ವರ್ಗ' ಎಂದು ಕರೆದಿದ್ದಾನೆ.

ರಾಜಸ್ಥಾನದ ಜೈಪುರ ವಿಮಾನ ನಿಲ್ದಾಣದಲ್ಲಿ ಇಳಿದಾಗ ಬೆಳಕು ಹರಿದಿತ್ತು. ಹಿಂದಿನ ರಾತ್ರಿ ಅರೆಬರೆ ನಿದ್ದೆಯಲ್ಲೇ ತೂಕಡಿಸಿ ಮೈ ಜಟಿಲವಾಗಿತ್ತು. ಮೊದಲು ಇಳಿದವರೆ ಒಳ್ಳೆಯ ತಿಂಡಿಯ ಹೋಟೆಲ್ ಎಲ್ಲಿದೆ ಅಲ್ಲಿಗೆ ಗಾಡಿ ಓಡಿಸು ಮಾರಾಯ ಎಂದು ಡ್ರೈವರ್‌ನ ಬೇಡಿಕೊಂಡೆವು. ವಿಮಾನ ನಿಲ್ದಾಣದ ಒಳಗಿನ ಯಾವ ತಿನಿಸುಗಳೂ ನಮಗೆ ತೃಪ್ತಿ ಕೊಟ್ಟಿರಲಿಲ್ಲ. ಎಲ್ಲದಕ್ಕೂ ದುಬಾರಿ ಹಣ ತೆತ್ತು ಮೈಮನಸುಗಳ ಧಗಧಗ ಉರಿಸಿಕೊಂಡಿದ್ದೆವು. ಮುಂದೊಂದು ಡಾಬಾದ ಮುಂದೆ ಗಾಡಿ ನಿಲ್ಲಿಸಿದಾಗ ಹುರಿದು ಉಪ್ಪು ಹಚ್ಚಿದ ಹಸಿ ಮೆಣಸಿನಕಾಯಿ ನುರಿದುಕೊಂಡು ವಡಾಪಾವು ಬಾರಿಸಿದೆವು. ಖಡಕ್ ಟೀ ಕುಡಿದು ಹೊಟ್ಟೆಯ ಗೊಣಗಾಟವನ್ನು ನಿಲ್ಲಿಸಿದೆವು.

ನಾವು ಹೊರಟಿರುವುದು ಭಾರತದ ಪಕ್ಷಿಕಾಶಿ ಎಂದೇ ಹೆಸರಾದ ಭರತಪುರದ ಕಿಯೋಲಾಡಿಯೊ ರಾಷ್ಟ್ರೀಯ ಅಭಯಾರಣ್ಯಕ್ಕೆ. ಪ್ರಪಂಚದ ಪಕ್ಷಿ ವಿಜ್ಞಾನಿಗಳಿಗೆ ಪ್ರಮುಖ ಆಕರ್ಷಣೆ ಆಗಿರುವ ಈ ಸ್ಥಳದಲ್ಲಿ ಮುನ್ನೂರ ಅರವತ್ತಾರಕ್ಕೂ ಹೆಚ್ಚು ಜಾತಿಯ ಪಕ್ಷಿಗಳಿದ್ದಾವೆ. ಹಕ್ಕಿಗಳು ಇಲ್ಲಿ ತವರಿಗೆ ಬಂದ ತಂಗಿಯಂತೆ ಹೆಚ್ಚು ದಿನ ನೆಲೆಸಲು ಇಚ್ಛೆಸುತ್ತವೆ. ಯಾವ ಆಪತ್ತು ಇಲ್ಲದ ಈ ಸ್ಥಳ ಇವಕ್ಕೆ ಆಹಾರ ಹುಡುಕಲು, ಸಂತಾನ ವೃದ್ಧಿಸಿಕೊಳ್ಳಲು ನೆಮ್ಮದಿಯ ವಾತಾವರಣ ಕಲ್ಪಿಸಿದೆ. ಅಚ್ಚರಿ ಎಂದರೆ ಈ ಜಾಗೆ ಮಾನವ ನಿರ್ಮಿತ ಕೃತಕ ತೇವಭೂಮಿ. ಸ್ಥಳೀಯ ರಾಜರುಗಳು ಐಷಾರಾಮಿ ಪ್ರಾಣಿ–ಪಕ್ಷಿಗಳ ಬೇಟೆಗೆ ಬಳಸುತ್ತಿದ್ದ ಜಾಗ. ಈಗ ವಿಶ್ವ ಪರಂಪರೆಯ ತಾಣವಾಗಿ ಬದಲಾಗಿದೆ. ವಿಶ್ವ ವನ್ಯಜೀವಿ ನಿಧಿಯ ಸಂಸ್ಥಾಪಕ ಪೀಟರ್ ಸ್ಕಾಟ್ ಈ ಅಭಯಾರಣ್ಯವನ್ನು 'ಜಗತ್ತಿನ ಪಕ್ಷಿ ವೀಕ್ಷಕರ ಸ್ವರ್ಗ' ಎಂದು ಕರೆದಿದ್ದಾನೆ.

ಖಗಗಳು ಚಳಿಗಾಲದಲ್ಲಿ ಮಂಗೋಲಿಯಾ, ಸೈಬೀರಿಯಾ, ರಷ್ಯಾ, ಮತ್ತು ಚೀನಾದಿಂದ ಇಲ್ಲಿಗೆ ವಲಸೆ ಬರುತ್ತವೆ. ಟರ್ನ್ ಬಂಟಿಂಗ್ಸ್, ಲಾರ್ಕ್, ಸೈಬೀರಿಯನ್ ಕ್ರೇನ್, ಗ್ರೇಟ್ ವೈಟ್ ಪೆಲಿಕನ್, ಹೆರಾನ್, ಬಾರ್ ಹೆಡೆಡ್ ಗೂಸ್ ಮುಂತಾದ ಜನಪ್ರಿಯ ಪ್ರಜಾತಿಗಳು ಇಲ್ಲಿ ಕಾಣುತ್ತವೆ. ಒಂದು ವಾರ ಬಿಡಾರ ಹೂಡಿ ಇಲ್ಲಿರುವ ಪಕ್ಷಿಗಳ